ಸುಪ್ರಭಾತ, ಮುಸ್ಸಂಜೆಯ ಸವಿನೋಟ, ಬೆಳದಿಂಗಳ ಚೆಲ್ಲಾಟ – ಎಲ್ಲವೂ ಎದೆಯಲ್ಲಿ ನವಿರುತನ ಸೋಂಕಿಸಿದ್ದವು! ಶಾಂತನ ಮಾತುಗಳಲ್ಲಿ ಅಘನಾಶಿನಿ ಮತ್ತು ಶರಾವತಿ ತೀರಗಳು ಸುಳಿದಾಡಿದರೆ ಕುಸುಮಳಿಗೆ ಖುಶಿಯಾಗುತ್ತಿತ್ತು. ಹೊನ್ನಾವರದ ಅಜ್ಜಿಮನೆಯ ಬಾಲ್ಯದ ನೆನಪುಗಳಲ್ಲಿ ಅವಳಿಗೆ ಶರಾವತಿ ತೀರವು ಅಚ್ಚಳಿಯದೇ ಹರಿಯುತ್ತಿತ್ತು. ಕುಸುಮಳಿಗೆ ಸಂದೇಶಗಳನ್ನು ಟೈಪಿಸುವಾಗ ಶಾಂತಾರಾಮನ ಕಾವ್ಯಶಕ್ತಿ ಅವನೇ ಅಚ್ಚರಿಗೊಳ್ಳುವಂಥ ಅಕ್ಷರಸಾಲುಗಳಲ್ಲಿ ಅಭಿವ್ಯಕ್ತಿಗೊಳ್ಳುತ್ತಿತ್ತು.

"ನಿಮ್ಮ ಮೆಸೇಜಸ್ ಓದ್ತಾ ಇರಬೇಕು ಅನ್ಸುತ್ತೆ... ನಿಮ್ಮ ಮಾತು ಕೇಳ್ತಾ ಇರಬೇಕು ಅಂತ ಅನ್ಸುತ್ತೆ" ಎನ್ನುತ್ತಿದ್ದಳು.

"ಹೇ ಡೇಂಜರ್ ಅದು! ಯಾವುದಕ್ಕೂ ಅಂಟಿಕೊಳ್ಳಬೇಡಿ ಪ್ಲೀಸ್... ಜಸ್ಟ್ ಚಿಲ್" ಇವನು ಸದಾ ಎಚ್ಚರಿಸುತ್ತಿದ್ದ.

"ಐ ನೋ... ಆದ್ರೆ ನಿಮ್ಮ ಮಾತುಗಳೇ ಅಷ್ಟು ಚೆಂದ ಏನ ಮಾಡ್ಲಿ? ನಿಮ್ಮನ್ನು ಮೀಟ್ ಮಾಡಬೇಕು ಅನ್ಸುತ್ತೆ... ಒಮ್ಮೆ ನಮ್ಮ ಮನೆಗೆ ಬನ್ನಿ, ಪ್ಲೀಸ್."

"ರೀ, ಮನೆಗೆಲ್ಲ ಬರೋಕೆ ಆಗಲ್ಲಾರಿ, ಹೀಗೆ ಅಂಟಿಕೊಳ್ಳೋರು ನಂಗಿಷ್ಟ ಆಗಲ್ಲ."

"ಮನೆಗೆ ಬರ್ತೀರೋ ಇಲ್ವೋ ಆದರೆ ನೀವು ನನ್ನ ಮನದಲ್ಲಿ ಬಂದಾಗಿದೆ."

"ಹೇ ನಾನ್ಸೆನ್ಸ್... ನನ್ನ ಮಾತಿಗೆ ಬೆಲೆ ಕೊಟ್ಟಿಲ್ಲ ನೀವು. ಯಾವತ್ತೂ ಅಂಟಿಕೊಳ್ಳಬಾರದು ಅಂತ ಹೇಳಿಲ್ವಾ ನಿಮ್ಗೆ?"

ಶಾಂತಾರಾಮನ ನಾನ್ಸೆನ್ಸ್ ಮೆಸೇಜಿಗೆ ಕುಸುಮ ಮೌನವಾಗಿಬಿಟ್ಟಿದ್ದಳು. ಹೊಸ ವರ್ಷಾಚರಣೆಯ ಸಂಭ್ರಮದ ಸಂದರ್ಭದಲ್ಲಿ ಅವಳ ಮನಸ್ಸಿಗೆ ನೋವಾಗುವಂತೆ ಮಾಡಿದ್ದಕ್ಕೆ ಸಂತಾಪ ಪಟ್ಟುಕೊಂಡಿದ್ದ. ಶಾಂತಾರಾಮನಿಗೂ ಕುಸುಮಳ ಜೊತೆ ಎಸ್ಸೆಮ್ಮೆಸ್ಸುಗಳನ್ನು ವಿನಿಮಯ ಮಾಡಿಕೊಳ್ಳುವಾಗ ಖುಷಿಯಾಗುತ್ತಿದ್ದದ್ದು ಸುಳ್ಳಲ್ಲ. ಅವನಿಗರಿವಿಲ್ಲದೇ ಕೆಲವೊಮ್ಮೆ ಸುಂದರ ಸಾಲುಗಳು ಹೊಳೆಯುತ್ತಿದ್ದದ್ದೂ ನಿಜ. ಆದರೆ ಅಂಥ ಸಂದೇಶಗಳು ತಮ್ಮನ್ನು ಅಗತ್ಯಕ್ಕಿಂತ ಹೆಚ್ಚು ಆತ್ಮೀಯರನ್ನಾಗಿಸದಂತೆ ಪ್ರಜ್ಞಾಪೂರ್ವಕ ಕಾಳಜಿ ವಹಿಸುತ್ತಿದ್ದ. ಪ್ರೀತಿ ಬಗ್ಗೆ ಶಾಂತಾರಾಮನ ಗ್ರಹಿಕೆಯನ್ನು ಬದಲಾಯಿಸಿದ ವಿಫಲ ಪ್ರೇಮದ ಕತೆಯೇ ಅದಕ್ಕೆ ಕಾರಣವಾಗಿತ್ತು. ಶಾಂತಾರಾಮನಿಗೆ ಚಿರವಿರಹಿ ಪಟ್ಟವನ್ನೂ ನಾಲ್ವತ್ತಾದರೂ ಬ್ಯಾಚುಲರ್ ಹುದ್ದೆಯನ್ನೂ ಗಟ್ಟಿಯಾಗಿಸಿದ ಕತೆಯದು. ಆದರೆ ಪ್ರೇಮದ ಹ್ಯಾಂಗೋವರಿನಲ್ಲಿ ಬರೆದ ಅವನ ಕತೆ ಕವನಗಳು ಪತ್ರಿಕೆ ಸಂಪಾದಕರ ಮತ್ತು ಓದುಗರ ಮೆಚ್ಚುಗೆಯನ್ನು ಪಡೆಯುತ್ತಿದ್ದವು. ತನ್ನ ಕಹಿ ಅನುಭವದ ಹಿನ್ನಲೆಯಲ್ಲಿ ಸಂಬಂಧಗಳು ಆಪ್ತವಾದಷ್ಟೂ ನೋವೂ ಆಳವಾಗುತ್ತವೆ ಎಂದು ಸಾಮಾನ್ಯ ಸೂತ್ರವೆಂಬಂತೆ ಬರೆಯುತ್ತಿದ್ದ. ಮನದೊಳಗೆ ಬರುವವರೆಲ್ಲ ಹೃದಯಕ್ಕೆ ಗೀರು ಎಳೆದೇ ಹೋಗುವವರು ಎಂಬುದು ಅವನ ಅಚಲ ನಂಬಿಕೆ. ಕತೆಗಾರನಾಗಿ ಓದುಗರ ಜೊತೆಗಿನ ಸಂವಾದ ಜರೂರಾಗಿದ್ದರೂ ಅದಕ್ಕೊಂದು ಲಕ್ಷ್ಮಣ ರೇಖೆಯನ್ನು ತಾನೇ ಎಳೆದುಕೊಂಡು ಸುರಕ್ಷಿತ ವಲಯ ಸೃಷ್ಟಿಸಿಕೊಂಡಿದ್ದ. ಕುಸುಮ "ನೀವು ಮನದೊಳಗೆ ಬಂದಾಗಿದೆ" ಎಂದಾಗ ಅದು ತನ್ನ ವ್ಯಕ್ತಿತ್ವದ ಮೇಲಿನ ದಾಳಿ ಎಂಬ ರೀತಿಯಲ್ಲಿ ವ್ಯಗ್ರನಾಗಿದ್ದ. ಆದರೆ ನಾನ್ಸೆನ್ಸ್ ಎಂದು ಬೈಯ್ಯುವಷ್ಟು ಸನ್ನಿವೇಶ ತೀವ್ರವಾಗಿರಲಿಲ್ಲ ಎಂಬ ಅರಿವಾದದ್ದು ಅವಳು ಮೌನವಾದಾಗಲೇ. ಕುಸುಮಳ ಸಂದೇಶಗಳಿಲ್ಲದೇ ಖಾಲಿತನದಿಂದ ತುಂಬಿದಂತೆ ಅನಿಸಿತೊಡಗಿತ್ತು ಅವನಿಗೆ. ತನ್ನೆಲ್ಲ ಜಾಣತನವನ್ನು ಬಳಸಿ ಚಂದದ,